# ಸ್ವಾಮಿ ವಿವೇಕಾನಂದರ ಮಾತೃಭಕ್ತಿ – ಪತ್ರವ್ಯವಹಾರದಲ್ಲಿ

ಕೆ. ಆರ್. ಮೋಹನ್

**ನ**ರೇಂದ್ರನು ಭುವನೇಶ್ವರಿ ದೇವಿಯವರ ಕಣ್ಮಣಿ. ಸ್ವಾಮಿ ವಿವೇಕಾನಂದರಿಗೆ ಅತ್ಯಂತ ಪ್ರೀತಿಪಾತ್ರ ವ್ಯಕ್ತಿಯಿದ್ದರೆ ಅದು ಅವರ ತಾಯಿ. ಜುನಾಗಢದಲ್ಲಿದ್ದ ತಮ್ಮ ಮಿತ್ರ ಹರಿದಾಸ ದೇಸಾಯಿಯವರಿಗೆ ಸ್ವಾಮೀಜಿ ೨೯-೧-೧೮೯೪ ರಂದು ಬರೆದ ಪತ್ರದಲ್ಲಿ ತಮ್ಮ ಸಂದಿಗ್ಧತೆಯನ್ನು ಹೀಗೆ ತೋಡಿಕೊಂಡಿದ್ದಾರೆ: "ದೀನಾವಸ್ಥೆಯಲ್ಲಿದ್ದ ನನ್ನ ತಾಯಿ ಮತ್ತು ತಮ್ಮಂದಿರನ್ನು ನೀವು ನೋಡಲು ಹೋಗಿದ್ದು ನನಗೆ ಸಂತೋಷವಾಗಿದೆ. ನನ್ನ ಹೃದಯದ ಕೋಮಲ ಭಾಗವನ್ನು ಸ್ಪರ್ಶಿಸಿದ್ದೀರಿ. ನಾನು ನಿಷ್ಕರುಣಿಯಲ್ಲ. ಈ ಪ್ರಪಂಚದಲ್ಲಿ ನಾನು ಪ್ರೀತಿಸುವುದಿದ್ದರೆ ನನ್ನ ತಾಯಿಯನ್ನು ಮಾತ್ರ. ಶ್ರೀರಾಮಕೃಷ್ಣ ಪರಮಹಂಸರ ಅವತಾರದ ಉದ್ದೇಶವನ್ನು ಸಾಫಲ್ಯಗೊಳಿಸಲು ಮತ್ತು ಅವರನ್ನು ನಂಬಿ ಭೋಗವಿಲಾಸಗಳನ್ನು ತೊರೆದ ಅವರ ತರುಣ ಶಿಷ್ಯರಿಗೆ ಮಾರ್ಗದರ್ಶನ ಮಾಡಲು, ನಾನು ಪ್ರಾಪಂಚಿಕ ಬಂಧನಗಳನ್ನು ಬಿಡದೆ ಇರಲು ಸಾಧ್ಯವಿಲ್ಲವೆಂದು ನನಗೆ ಮನವರಿಕೆಯಾಗಿದೆ. ಇವರೆಲ್ಲರೂ ಲೋಕೋದ್ಧಾರ ಮಾಡಿದ್ದಾರೆ. ಇನ್ನೂ ಉದ್ಧಾರದ ಕೆಲಸಗಳನ್ನು ಮಾಡಲಿದ್ದಾರೆ. ಮುಂದೆ ಜಗತ್ತು ಅವರನ್ನು ಹರಸಲಿದೆ. ಒಂದು ಕಡೆ ಭಾರತ ಹಾಗೂ ಜಗತ್ತಿನ ಧಾರ್ಮಿಕ ಉತ್ಥಾನ ಮತ್ತು ಸಾವಿರಾರು ವರ್ಷಗಳಿಂದ ನಿರ್ಲಕ್ಷಿಸಲ್ಪಟ್ಟ ದೀನದಲಿತರ ಉದ್ಧಾರ, ಇನ್ನೊಂದು ಕಡೆ ಹತ್ತಿರದ ಬಂಧುಗಳು ಶೋಚನೀಯ ಪರಿಸ್ಥಿತಿಗೆ ಇಳಿದಿರುವುದರಿಂದ ಅವರಿಗೆ ಸಹಾಯ ಮಾಡಬೇಕಾದದ್ದು. ಈ ಎರಡರ ಪೈಕಿ ಮೊದಲನೆಯದನ್ನು ನಾನು ಆಯ್ಕೆ ಮಾಡಿದೆ. ಬಾಕಿಯದು ಭಗವಂತನಿಗೆ ಸೇರಿದ್ದು."

ಸ್ವಾಮೀಜಿಯವರ ೭೭೫ ಕ್ಕೂ ಹೆಚ್ಚು ಪತ್ರಗಳು ಪ್ರಕಟವಾಗಿವೆ. ಅವುಗಳಲ್ಲಿ ಸ್ವಾಮೀಜಿ ತಾಯಿಗೆ ಬರೆದದ್ದು ಅಥವಾ ಅವರ ತಾಯಿ ಅವರಿಗೆ ಬರೆದ ಒಂದು ಪತ್ರವೂ ಇಲ್ಲ. ಆದರೆ ಸ್ವಾಮಿ ವಿವೇಕಾನಂದರಿಗೆ ತಮ್ಮ ತಾಯಿಯ ಆರ್ಥಿಕ ಭದ್ರತೆಯ ಬಗ್ಗೆ ಇದ್ದ ಕಳಕಳಿ ಹಾಗೂ ಅವರ ಮೇಲೆ ಇದ್ದ ನಿಷ್ಕಪಟ ಗೌರವ ಸ್ವಾಮೀಜಿಯವರ ಜೀವನ ಚರಿತ್ರೆಯನ್ನು ಓದುವವರಿಗೆಲ್ಲರಿಗೂ ವೇದ್ಯ. ೧೮೯೩ ರಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಸ್ವಾಮೀಜಿಯವರಿಗೆ ಅಪಾರ ಖ್ಯಾತಿ ದೊರೆಯಿತು. ಇದರಿಂದ ಅಸೂಯೆಗೊಂಡ ಬ್ರಾಹ್ಮ ಸಮಾಜದ ನೇತಾರ ಪ್ರತಾಪಚಂದ್ರ ಮಜುಮ್‌ದಾರ್ ಸ್ವಾಮೀಜಿಯ ಚಾರಿತ್ರ್ಯದ ಬಗ್ಗೆ ಮಿಥ್ಯಾಪವಾದ ಹೊರಿಸಿ ಅವಮಾನಗೊಳಿಸುವ ಪ್ರಚಾರಕಾರ್ಯವನ್ನು ದೀರ್ಘಕಾಲ ನಡೆಸಿದರು. ಅಮೆರಿಕ ಮತ್ತು ಭಾರತಗಳಲ್ಲಿ ತಮ್ಮ ಮೇಲೆ ಆರೋಪಿಸಲಾಗುತ್ತಿದ್ದ ಮಿಥ್ಯಾಪವಾದಗಳನ್ನು ಸ್ವಾಮೀಜಿ ಅಲಕ್ಷ್ಯ ಮಾಡಿದರು. ಹಾಗೆಯೇ ಅಮೇರಿಕದಲ್ಲಿ ತಮ್ಮ ಮೇಲೆ ಹೇರುತ್ತಿದ್ದ ಪ್ರಶಂಸೆಗಳನ್ನೂ ಅವರು ಉಪೇಕ್ಷೆ ಮಾಡಿದರು. ೨೬.೪.೧೮೯೪ ರಂದು ನ್ಯೂಯಾರ್ಕ್‌ನಿಂದ ತಮ್ಮ ಶಿಷ್ಯೆ ಮಿಸ್ ಇಸಾಬೆಲ್ ಮೆಕಂಡ್ಲಿಗೆ ಅವರು ಈ ರೀತಿ ಬರೆಯುತ್ತಾರೆ: "ಮಜುಮ್‌ದಾರ್ ಮತ್ತು ಅವನ ಜತೆಯವರು ಕೊಲ್ಕತಾದಲ್ಲಿ ನನ್ನ ಬಗ್ಗೆ ಮಾಡುತ್ತಿರುವ ಅಪಪ್ರಚಾರದ ಬಗ್ಗೆ ತಲೆಕೆಡಿಸಿಕೊಳ್ಳಲಾರೆ. ಒಂದು ವಿಚಾರ ಬಿಟ್ಟರೆ ನನಗೆ ಬೇರಾವ ಚಿಂತೆಯಿಲ್ಲ. ನನಗೆ ವಯಸ್ಸಾದ ತಾಯಿ ಇದ್ದಾಳೆ. ಜೀವನಪೂರ್ತಿ ಕಷ್ಟಗಳನ್ನು ಅವಳು ಅನುಭವಿಸಿದ್ದಾಳೆ. ಆದರೂ ದೇವರ ಮತ್ತು ಮಾನವರ ಸೇವೆಗಾಗಿ ತನ್ನ ಅತ್ಯಂತ ಪ್ರೀತಿಯ ಪುತ್ರನನ್ನು ಸಮರ್ಪಣೆ ಮಾಡಿ ಸಹಿಸಿಕೊಂಡಿದ್ದಾಳೆ. ದೂರದ ದೇಶದಲ್ಲಿ ಪಶುವಿನ ಹಾಗೆ ಅನೈತಿಕ ಜೀವನವನ್ನು ನಾನು ನಡೆಸುತ್ತಿದ್ದೇನೆಂದು ಮಜುಮ್‌ದಾರ್ ಮಾಡುವ ಅಪಪ್ರಚಾರ ಅವಳನ್ನು ಸಾವಿನೆಡೆಗೆ ಒಯ್ಯಬಹುದು. ಆದರೆ ದೇವರು ದೊಡ್ಡವ. ಅಮೃತಪುತ್ರರಿಗೆ ಕೆಡುಕು ಮಾಡಲು ಸಾಧ್ಯವಿಲ್ಲ."



ಭುವನೇಶ್ವರಿ ದೇವಿ

ನಿವೃತ್ತ ಬ್ಯಾಂಕ್ ಅಧಿಕಾರಿಗಳಾಗಿರುವ ಲೇಖಕರ ಹಲವು ಲೇಖನಗಳು ಈ ಪತ್ರಿಕೆಯಲ್ಲಿ ಮತ್ತು 'ಕಸ್ತೂರಿ' ಯಲ್ಲಿ ಪ್ರಕಟವಾಗಿವೆ. ಇವರು ಮೈಸೂರು ರಾಮಕೃಷ್ಣ ಆಶ್ರಮದ ಭಕ್ತರು.

> ತಾಯಿಯು ಕುಟುಂಬದ ದೇವರು. ಇದರ ಅರ್ಥವೇನೆಂದರೆ, ಜಗತ್ತಿನಲ್ಲಿ ನಾವು ಕಾಣುವ ಏಕಮಾತ್ರ ನೈಜ ಪ್ರೇಮ, ಅತ್ಯಂತ ನಿಃಸ್ವಾರ್ಥವಾದ ಪ್ರೀತಿ ಕಂಡುಬರುವುದು ತಾಯಿಯಲ್ಲಿಯೇ. ಆಕೆಯು ಯಾವಾಗಲೂ ಕಷ್ಟಪಡುತ್ತಿರುತ್ತಾಳೆ, ಯಾವಾಗಲೂ ಪ್ರೀತಿಸುತ್ತಿರುತ್ತಾಳೆ. ತಾಯಿಯಲ್ಲಿ ಕಂಡುಬರುವ ಪ್ರೀತಿಗಿಂತ ಮಿಗಿಲಾಗಿ ಬೇರೆ ಯಾವುದು ತಾನೇ ಭಗವತ್ಪ್ರೇಮವನ್ನು ಪ್ರತಿನಿಧಿಸಬಲ್ಲುದು? **– ಸ್ವಾಮಿ ವಿವೇಕಾನಂದ**

೧೮೯೮ ನೇ ಇಸವಿ ನವೆಂಬರ್ ೨೨ ರಂದು ತಮ್ಮ ಜೀವಿತದ ಕೊನೆಯಲ್ಲಿ ಸ್ವಾಮಿ ವಿವೇಕಾನಂದರು ಬೇಲೂರು ಮಠದಿಂದ ತಮ್ಮ ಪ್ರೀತಿಪಾತ್ರರಾದ ಖೇತ್ರಿಯ ಮಹಾರಾಜ ಅಜಿತಸಿಂಹರಿಗೆ ಹೀಗೆ ಪತ್ರ ಬರೆದರು:

"ನನ್ನ ಜೀವನದಲ್ಲಿ ನಿಮ್ಮೊಬ್ಬರನ್ನೇ ಸ್ನೇಹಿತನಾಗಿ ಭಾವಿಸಿದ್ದೇನೆ. ಆದ್ದರಿಂದ ನನ್ನ ಮನಸ್ಸನ್ನು ತೆರೆದಿಡಲು ಯಾವ ಸಂಕೋಚವೂ ನನಗಿಲ್ಲ. ಇಂದು ನನ್ನ ಒಂದು ಅತಿ ಮುಖ್ಯವಾದ ಕೆಲಸಕ್ಕಾಗಿ ನಿಮ್ಮನ್ನು ಸಂಪರ್ಕಿಸುತ್ತಿದ್ದೇನೆ. 'ಲೋಕೋದ್ಧಾರ ಮಾಡಲು ಹೋಗಿ ನನ್ನ ಹೆತ್ತ ತಾಯಿಯನ್ನು ಬಹಳವಾಗಿ ಕಡೆಗಣಿಸಿದ್ದೇನೆ' ಎಂಬ ಪಾಪಪ್ರಜ್ಞೆ ನನ್ನನ್ನು ಬಹಳವಾಗಿ ಕೊರೆಯುತ್ತಿದೆ. ಈಗ ನನ್ನ ಕೊನೆಯ ಆಸೆ ಏನೆಂದರೆ ನನ್ನ ತಾಯಿಯ ಜತೆ ಇದ್ದು ಅವಳ ಸೇವೆ ಮಾಡಬೇಕು ಎಂದು. ಈ ರೀತಿ ಮಾಡುವುದರಿಂದ ನಮ್ಮಿಬ್ಬರ ಅಂತ್ಯ ಸುಗಮವಾಗುವುದು. ಈಗ ಅವಳು ಒಂದು ಜೋಪಡಿಯಲ್ಲಿ ವಾಸಿಸುತ್ತಿದ್ದಾಳೆ. ಅವಳಿಗೆ ಅನುಕೂಲಕರವಾದ ಒಂದು ಸಣ್ಣ ಮನೆ ಕಟ್ಟಬೇಕೆಂದಿದ್ದೇನೆ. ತಮ್ಮ ಪ್ರೀತಿಯ ಮಿತ್ರರಿಗಾಗಿ ಸಹಾಯಮಾಡಲು ರಘುವಂಶದವರಿಗೆ ಇದೊಂದು ದೊಡ್ಡ ಸಂಗತಿಯೆ? ಬೇರೆ ಯಾರ ಸಹಾಯ ಕೇಳಬೇಕು ಎಂದು ನನಗೆ ಗೊತ್ತಿಲ್ಲ. ಯುರೋಪಿನಿಂದ ನನಗೆ ಬಂದ ಹಣದ ಪ್ರತಿ ಪೈಸೆಯೂ ರಾಮಕೃಷ್ಣ ಮಿಷನ್ನಿನ ಕೆಲಸಕ್ಕಾಗಿಯೇ ವಿನಿಯೋಗವಾಗಿದೆ. ನನ್ನ ಸ್ವಂತಕ್ಕೆ ಬೇರೆಯವರಿಂದ ಯಾಚನೆ ಮಾಡುವ ಹಾಗಿಲ್ಲ. ಆದ್ದರಿಂದ ನಮ್ಮ ಮನೆಯವರ ಸಮಸ್ಯೆಗಳನ್ನು ನಿಮ್ಮ ಎದುರು ತೆರೆದ ಮನಸ್ಸಿನಿಂದ ಇಟ್ಟಿದ್ದೇನೆ. ಬೇರೆ ಯಾರಿಗೂ ಇವು ಗೊತ್ತಿಲ್ಲ. ನಾನು ದಣಿದಿದ್ದೇನೆ. ಕೊನೆಯದಾಗಿ ಉಪಕಾರ ಮಾಡಿ ಎಂದು ಪ್ರಾರ್ಥನೆ ಮಾಡುತ್ತೇನೆ."

ತಮ್ಮ ತಾಯಿಯ ಬಗ್ಗೆ ಸ್ವಾಮೀಜಿಗೆ ಎಷ್ಟು ಕೋಮಲವಾದ ಪ್ರೇಮವಿತ್ತು ಎಂದು ಈ ಪತ್ರದಿಂದ ಗೊತ್ತಾಗುತ್ತದೆ. ಸ್ವಾಮೀಜಿ ಪ್ರೇಮದ ಪ್ರತೀಕವಾಗಿದ್ದರು. ಈ ಪತ್ರದಲ್ಲಿನ ಪ್ರತಿಯೊಂದು ಶಬ್ದದಲ್ಲಿಯೂ ಅವರ ಮಾತೃಭಕ್ತಿ ತೋರಿಬರುತ್ತಿದೆ. ಉಕ್ಕಿನ ಬಲ ಹಾಗೂ ಹೂವಿನ ಮೃದುತ್ವಗಳ ಅಪರೂಪದ ಸಮ್ಮಿಶ್ರಣ ವನ್ನು ಸ್ವಾಮೀಜಿಯವರ ಈ ಪತ್ರದಲ್ಲಿ ಕಾಣುತ್ತೇವೆ.

ಸ್ವಾಮೀಜಿ ಹಾಗೂ ಅಜಿತ್‌ಸಿಂಹರ ನಡುವೆ ಬಹಳ ನಿಕಟ ಹಾಗೂ ಅಂತಃಕರಣಪೂರ್ವಕವಾದ ಸಂಬಂಧವಿತ್ತು. ಮೊದಲನೇ ಬಾರಿ ಖೇತ್ರಿಗೆ ಭೇಟಿಕೊಟ್ಟಾಗ ಸ್ವಾಮೀಜಿ ಎರಡೂವರೆ ತಿಂಗಳು ಕಾಲ ಅಲ್ಲಿ ತಂಗಿದ್ದರು. ಭಾರತದ ಅಭ್ಯುದಯಕ್ಕೆ ಏನಾದರೂ ನಾನು ಅಳಿಲು ಸೇವೆ ಮಾಡಿದ್ದರೆ ಅದಕ್ಕೆ ಖೇತ್ರಿ ರಾಜರ ಭೇಟಿಯೇ ಕಾರಣವೆಂದು ಸ್ವಾಮೀಜಿ ೧೭–೧೨–೧೮೯೭ ರಂದು ಖೇತ್ರಿಯಲ್ಲಿ ನಡೆದ ಒಂದು ಸಭೆಯಲ್ಲಿ ಹೇಳಿದರು. "ನಿರ್ದಿಷ್ಟ ಕಾಲದಲ್ಲಿ ನಿರ್ದಿಷ್ಟ ಜನರು ಒಟ್ಟಾಗಿ ಕೆಲಸಮಾಡಲೆಂದೇ ಜನ್ಮತಾಳುತ್ತಾರೆ. ಹಾಗೆ ಅಜಿತಸಿಂಹರು ಮತ್ತು ನಾನು, ಜನರ ಅಭ್ಯುದಯದ ಮಹತ್ಕಾರ್ಯ ಮಾಡಲು ಜನ್ಮ ತಾಳಿದ್ದೇವೆ. ನಾವು ಪರಸ್ಪರ ಪೋಷಕ ಮತ್ತು ಪೂರಕರು" ಎಂದು ಸ್ವಾಮೀಜಿ ೧೧–೧೦–೧೮೯೭ ರಂದು ಮುನ್ಷಿ ಜಗಮೋಹನರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ. ಇಂತಹ ಸ್ನೇಹಪೂರ್ಣ ಮತ್ತು ಆತ್ಮೀಯ ಸಂಬಂಧ ಖೇತ್ರಿಯ ರಾಜ ರೊಡನೆ ಸ್ವಾಮೀಜಿಯವರಿಗಿತ್ತು. ಹಾಗಾಗಿ ಅವರ ಹತ್ತಿರ ತಮ್ಮ ತಾಯಿಯ ಸಲುವಾಗಿ ಸಹಾಯವನ್ನು ಕೇಳಲು ಅವರಿಗೆ ಸಾಧ್ಯ ವಾಯಿತು.

ಈ ಪತ್ರ ಬಂದ ಕೂಡಲೇ ಮಹಾರಾಜರು ೫೦೦ ರೂಪಾಯಿಗಳನ್ನು ಕಳುಹಿಸಿಕೊಟ್ಟರು. ಆದರೆ ಮನೆ ಕಟ್ಟುವ ವಿಚಾರವನ್ನು ಕಾರಣಾಂತರದಿಂದ ಬಿಡಬೇಕಾಯಿತು. ಸ್ವಲ್ಪ ಸಮಯದ ನಂತರ ಸ್ವಾಮೀಜಿ ೫,೦೦೦ ರೂಪಾಯಿ ಸಾಲ ಮಾಡಿ ತಮ್ಮ ಅತ್ತೆಯಿಂದ ಒಂದು ಮನೆ ಖರೀದಿ ಮಾಡಿದರು. ಆದರೆ ಈ ಅತ್ತೆ ಹಕ್ಕು ಪತ್ರ ಕೊಡಲು ನಿರಾಕರಿಸಿ ಸ್ವಾಮೀಜಿಯವರಿಗೆ ಹಾಡುಹಗಲೇ ಮೋಸಮಾಡಿದಳು. ತಮ್ಮ ಅಮೆರಿಕದ ಶಿಷ್ಯೆ ಶ್ರೀಮತಿ ಓಲೆ ಬುಲ್‌ಗೆ ೬.೮.೧೮೯೯ ರಲ್ಲಿ ಬರೆದ ಪತ್ರದಲ್ಲಿ ಅವರು ಹೀಗೆ ತಿಳಿಸಿದ್ದಾರೆ: "ನೀನು ನೋಡಿದ ನನ್ನ ಅತ್ತೆ ನನ್ನನ್ನು ಮೋಸಗೊಳಿಸಲು ಒಂದು ಉಪಾಯ ಮಾಡಿದ್ದಳು. ಅವಳು ಮತ್ತು ಅವಳ ಕಡೆ ಜನರು ೬,೦೦೦ ರೂಪಾಯಿಗಳಿಗೆ ಮನೆ ಮಾರುವ ಸಂಚು ಮಾಡಿದರು. ನನ್ನ ತಾಯಿಯ ಸಲುವಾಗಿ ನಂಬಿಕೆಯಿಟ್ಟು ನಾನು ಅದನ್ನು ಖರೀದಿ ಮಾಡಿದೆ. ಬಲವಂತದಿಂದ ಸ್ವಾಧೀನ ತೆಗೆದುಕೊಳ್ಳಲು ಸಂನ್ಯಾಸಿಯಾದ ನಾನು ಕೋರ್ಟಿಗೆ ಹೋಗುವುದಿಲ್ಲ ಎಂಬ ದುರಾಸೆಯಿಂದ ಅವರು ಮನೆಯನ್ನು ಇನ್ನೂ ಖಾಲಿ ಮಾಡಿಕೊಟ್ಟಿಲ್ಲ."

ಎರಡನೇ ಬಾರಿ ಅಮೆರಿಕಾದಲ್ಲಿದ್ದಾಗಲೂ ಸ್ವಾಮೀಜಿ, ತಮ್ಮ ತಾಯಿ ಹಲವಾರು ತೊಂದರೆಗಳನ್ನು ಎದುರಿಸುತ್ತಿರುವುದರ ಬಗ್ಗೆ ಚಿಂತೆ ಮಾಡಬೇಕಾಯಿತು. ೧೭–೧–೧೯೦೦ ರಂದು ಓಲೆ ಬುಲ್‌ಗೆ ಬರೆದರು: "ಮಠದ ಎಲ್ಲಾ ವ್ಯವಹಾರಗಳನ್ನು ಬಿಟ್ಟು ನನ್ನ ತಾಯಿಯ ಹತ್ತಿರ ಹೋಗಬೇಕಾಗಿದೆ ಎಂದು ಸ್ಪಷ್ಟವಾಗಿ ಗೋಚರವಾಗುತ್ತಿದೆ. ನನ್ನಿಂದ ಅವಳು ಬಹಳ ತೊಂದರೆ ಯನ್ನು ಅನುಭವಿಸಿದ್ದಾಳೆ. ಅವಳ ಕೊನೆಯ ದಿನಗಳು ಸುಲಭ ವಾಗುವ ಹಾಗೆ ನಾನು ಪ್ರಯತ್ನ ಮಾಡಬೇಕು. ಇದೇ ರೀತಿ ಆಚಾರ್ಯ ಶಂಕರರು ಮಾಡಿದರು. ೧೮೮೪ ರಲ್ಲಿ ನನ್ನ ತಾಯಿಯನ್ನು ಬಿಟ್ಟದ್ದು ದೊಡ್ಡ ತ್ಯಾಗ. ಅದಕ್ಕಿಂತ ಮಹಾನ್

ತ್ಯಾಗವೆಂದರೆ ಈಗ ತಾಯಿಯ ಹತ್ತಿರ ಮರಳಿ ಹೋಗುವುದು."

ಮತ್ತೆ, ೭–೩–೧೯೦೦ ರಂದು ಶ್ರೀಮತಿ ಓಲೆ ಬುಲ್‌ಗೆ ಬರೆಯುತ್ತಾ "ನನ್ನ ತಾಯಿಯ ಸಲುವಾಗಿ ಅವಳ ಹತ್ತಿರ ಹೋಗುತ್ತಿದ್ದೇನೆ. ಇದು ಅವಳ ಮತ್ತು ನನ್ನ ಕಡೆಯ ದಿನಗಳು. ನ್ಯೂಯಾರ್ಕ್‌ನಲ್ಲಿದ್ದ ೧೦೦೦ ಡಾಲರ್‌ನಿಂದ ತಿಂಗಳಿಗೆ ೯ ರೂಪಾಯಿಗಳಷ್ಟು ವರಮಾನ ಬರುತ್ತದೆ. ಖರೀದಿಸಿದ ಚಿಕ್ಕ ಭೂಮಿಯಿಂದ ಸುಮಾರು ೬ ರೂಪಾಯಿ ಮತ್ತು ಅವಳ ಹಳೆಯ ಮನೆಯಿಂದ ೬ ರೂ ಬಾಡಿಗೆ ಬರುತ್ತವೆ. ನನ್ನ ಜೀವನ ಪೂರ್ತಿ ಅವಳಿಗೆ ಚಿತ್ರಹಿಂಸೆ ಕೊಟ್ಟೆ. ಅವಳ ಇಡೀ ಜೀವನ ಸಂಕಟಮಯ. ಸಾಧ್ಯವಾದರೆ ಅವಳನ್ನು ಸ್ವಲ್ಪ ಸಂತೋಷದಲ್ಲಿರಿಸ ಬೇಕೆಂದು ನನ್ನ ಈ ಕೊನೆಯ ಪ್ರಯತ್ನ. ಅದೇ ರೀತಿ ಯೋಚನೆ ಮಾಡಿದ್ದೇನೆ" ಎಂದು ತಿಳಿಸಿದರು.

೧೮.೫.೧೯೦೦ ರಂದು ಸ್ವಾಮೀಜಿ ಶ್ರೀಮತಿ ಓಲೆ ಬುಲ್‌ಗೆ ಮತ್ತೊಂದು ಪತ್ರ ಬರೆದು, "ಶ್ರೀಮತಿ ಸೇವಿಯರ್ ನನ್ನ ಕುಟುಂಬದವರ ಸಲುವಾಗಿ ನನಗೆ ೬,೦೦೦ ರೂಪಾಯಿಗಳನ್ನು ಕೊಟ್ಟಿದ್ದಾಳೆ. ಇದನ್ನು ನಮ್ಮ ಸೋದರಸಂಬಂಧಿಗಳಿಗೆಲ್ಲಾ ಹಂಚಲಾಯಿತು. ಅದಲ್ಲದೆ ಮನೆ ಖರೀದಿಸಲು ೫,೦೦೦ ರೂಪಾಯಿಗಳನ್ನು ನಾನು ಮಠದಿಂದ ಸಾಲ ಮಾಡಿದ್ದೇನೆ" ಎಂದು ಮಾಹಿತಿ ನೀಡಿದರು.

ಸ್ವಾಮೀಜಿಯವರ ಬಾಲ್ಯದಲ್ಲಿ ಅವರು ಬಹಳ ಖಾಯಿಲೆ ಬಿದ್ದಾಗ, ಭುವನೇಶ್ವರಿ ದೇವಿಯವರು ಕಾಳಿಘಾಟ್‌ನಲ್ಲಿರುವ ಕಾಳಿಗೆ ಪ್ರಾರ್ಥನೆ ಮಾಡಿ, ಗುಣವಾದ ನಂತರ ವಿಶೇಷ ಪೂಜೆ ಸಲ್ಲಿಸುವುದಾಗಿ ಹರಕೆ ಹೊತ್ತಿದ್ದರು. ಸ್ವಾಮೀಜಿಯವರ ಆರೋಗ್ಯ ಈಗ ಹದಗೆಡುತ್ತಿರುವುದನ್ನು ನೋಡಿ, ತಾನು ಹಿಂದೆ ಮಾಡಿದ ಹರಕೆಯನ್ನು ಇನ್ನೂ ಸಲ್ಲಿಸದೆ ಇರುವುದು ನೆನಪಾಗಿ ಅವರಿಗೆ ದುಃಖವಾಯಿತು. ತಾಯಿಯ ಆದೇಶದ ಮೇರೆಗೆ ಹರಕೆ ಸಲ್ಲಿಸಲು ಸ್ವಾಮೀಜಿ ಕಾಳಿಘಾಟ್ ದೇವಸ್ಥಾನಕ್ಕೆ ಹೋದರು. ಅಲ್ಲಿರುವ ಆದಿ ಗಂಗಾ ನದಿಯಲ್ಲಿ ಸ್ನಾನ ಮಾಡಿ, ಒದ್ದೆಬಟ್ಟೆಯಲ್ಲಿ ದೇವಸ್ಥಾನಕ್ಕೆ ಹೋಗಿ, ಕಾಳಿಯ ಪ್ರತಿಮೆಗೆ ಮೂರು ಬಾರಿ ಉರುಳು ಪ್ರದಕ್ಷಿಣೆ ಹಾಕಿದರು. ಅನಂತರ ದೇವಸ್ಥಾನಕ್ಕೆ ಏಳು ಬಾರಿ ಪ್ರದಕ್ಷಿಣೆ ಮಾಡಿ, ನಟಮಂದಿರದಲ್ಲಿ ಹೋಮ ಮಾಡಿ, ಹರಕೆ ಸಲ್ಲಿಸಿದರು.

ತಮ್ಮ ತಾಯಿಯ ಬಹುಕಾಲದ ಆಸೆಯನ್ನು ಪೂರೈಸಲು ಸ್ವಾಮೀಜಿ ಪೂರ್ವ ಬಂಗಾಳದ ಢಾಕಾ, ಚಂದ್ರನಾಥ ಹಾಗೂ ಅಸ್ಸಾಮಿನ ಕಾಮಾಖ್ಯ ಕ್ಷೇತ್ರಗಳಿಗೆ, ತಮಗೆ ಖಾಯಿಲೆಯಾಗಿದ್ದರೂ, ತಾಯಿಯ ಜತೆ ಯಾತ್ರೆ ಮಾಡಿದರು. ಅವರ ಆರೋಗ್ಯ ಮತ್ತಷ್ಟು ಹದಗೆಟ್ಟಿದ್ದರಿಂದ ದಕ್ಷಿಣದ ರಾಮೇಶ್ವರ ಯಾತ್ರೆಯನ್ನು ಅನಿವಾರ್ಯವಾಗಿ ರದ್ದು ಮಾಡಬೇಕಾಯಿತು.

ತಮ್ಮ ಸಾವು ಸದ್ಯದಲ್ಲೆ ಸನ್ನಿಹಿತವೆಂದು ತಿಳಿದು ಸ್ವಾಮೀಜಿ ತಮ್ಮ ಸಂಗಾತಿ ಸ್ವಾಮಿ ಬ್ರಹ್ಮಾನಂದರಿಗೆ, ತಾಯಿಯ ಯೋಗ ಕ್ಷೇಮದ ಭಾರ ಹೊರಿಸಿ ತೀರ್ಥಯಾತ್ರೆ ಮಾಡಿಸಲು ವಿನಂತಿ ಮಾಡಿದರು. ಸ್ವಾಮೀಜಿಯವರ ನಿರ್ಯಾಣವಾದ ನಂತರ ಬ್ರಹ್ಮಾನಂದರು ಭುವನೇಶ್ವರಿ ದೇವಿಯವರನ್ನು ತಪ್ಪದೆ ಭೇಟಿ ಮಾಡಿ ಅವರಿಗೆ ಬೇಕಾದ ಸಹಾಯ ಮಾಡುತ್ತಿದ್ದರು. ಅವರಿಗಾಗಿ ಎರಡು ಬಾರಿ ಜಗನ್ನಾಥಪುರಿ ಯಾತ್ರೆಯ ವ್ಯವಸ್ಥೆಯನ್ನು ಮಾಡಿದರು. ೧೯೧೧ ನೇ ಇಸವಿಯಲ್ಲಿ ತಾವೇ ಸ್ವತಃ ಭುವನೇಶ್ವರಿ ದೇವಿಯವರನ್ನು ಕರೆದುಕೊಂಡು ಹೋಗಿ ಮೂರನೇ ಸಲ ಪುರಿ ಯಾತ್ರೆ ಮಾಡಿಸಿದರು. ಇದಾದ ಸ್ವಲ್ಪ ಸಮಯದಲ್ಲೆ ತಮ್ಮ ತ್ಯಾಗಮಯ ಜೀವನಕ್ಕೆ ವಿದಾಯ ಹೇಳಿ, ೧೯೧೧ ರ ಜುಲೈ ೨೫ ರಂದು ಭುವನೇಶ್ವರಿ ದೇವಿಯವರು ಕಾಲವಾದರು.

"ಮಾತಾಪಿತೃಗಳಿಗೆ ಗೌರವ ತೋರಿಸದೆ, ಅದರಲ್ಲೂ ತಾಯಿಯನ್ನು ಕಡೆಗಣಿಸಿ ಯಾರೂ ದೊಡ್ಡ ಸಾಧನೆಯನ್ನು ಮಾಡಲು ಸಾಧ್ಯವಿಲ್ಲ."

**– ಸ್ವಾಮಿ ವಿವೇಕಾನಂದ**

ಸ್ವಾಮಿ ವಿವೇಕಾನಂದರು, ಅವರ ಪತ್ರಗಳಲ್ಲಿ ತಮ್ಮ ತಾಯಿಯ ಬಗ್ಗೆ ಬರೆದಿರುವ ಈ ಕೆಲವು ಮಾತುಗಳು ಅವರ ಮಾತೃಭಕ್ತಿಯ ಅಗಾಧತೆಯನ್ನು ಸೂಚಿಸುತ್ತವೆ:

"ನಮ್ಮ ತಾಯಿಯು ನನಗೋಸ್ಕರ ಉಪವಾಸ, ಪ್ರಾರ್ಥನೆ ಮುಂತಾದ ನೂರಾರು ವ್ರತಗಳನ್ನು ಮಾಡಿದ್ದಳು. ನನ್ನಿಂದ ಅವು ಯಾವುದನ್ನೂ ಮಾಡಲು ಸಾಧ್ಯವಿಲ್ಲ. ನನ್ನಲ್ಲಿ ಏನಾದರೂ ಒಳ್ಳೆಯತನ, ಧಾರ್ಮಿಕ ಪ್ರವೃತ್ತಿಯಿದ್ದರೆ ಅವು ನಮ್ಮ ತಾಯಿಯ ಬಳುವಳಿ."

"ನಾನು ಜನ್ಮ ತಾಳುತ್ತೇನೆಂದು ತಿಳಿದು ನಮ್ಮ ತಾಯಿ ದೇಹ, ವಸ್ತ್ರ, ಆಹಾರ, ವಿಹಾರ, ಮನಸ್ಸುಗಳಲ್ಲಿ ಸಂತರಂತೆ ಪರಿಶುದ್ಧಳಾಗಿದ್ದಳು."

"ಬಾಲ್ಯದಲ್ಲಿ ಪ್ರತಿದಿನ ಬೆಳಿಗ್ಗೆ ನಾವು ಅವಳ ಚರಣಾಮೃತ ಸೇವನೆ ಮಾಡುತ್ತಿದ್ದೆವು."

ಭುವನೇಶ್ವರಿ ದೇವಿ ಮತ್ತು ಸ್ವಾಮಿ ವಿವೇಕಾನಂದರಂತಹ ಮಹಾನ್ ಚೇತನಗಳು ಯಾವಾಗಲೂ ಜನ್ಮ ತಾಳುವುದಿಲ್ಲ. ಸನಾತನ ಭಾರತೀಯ ಪರಂಪರೆಯ ಸುವರ್ಣ ಫಲಗಳಂತೆ ಆಗೊಮ್ಮೆ ಈಗೊಮ್ಮೆ ಬರುತ್ತಾರೆ. ಭಾರತದ ಚೈತನ್ಯವೇ ಒಡಮೂಡಿದಂತಹ ಹಾಗೂ ಅನುಷ್ಠಾನ ವೇದಾಂತದ ಜ್ವಲಂತ ರೂಪವಾಗಿರುವ ಸ್ವಾಮಿ ವಿವೇಕಾನಂದರು ಲೋಕೋದ್ಧಾರದ ಸಲುವಾಗಿ, ಮಾತೃಭಕ್ತಿಯ ಭವ್ಯ ಪರಂಪರೆಯ ಕೊಡುಗೆಯನ್ನೂ ಬಿಟ್ಟುಹೋಗಿದ್ದಾರೆ.